ಚರ್ಚೆ ಆದ ದಿನಾಂಕ 29.3.2022 153

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಲೀಂ ಅಹ್ಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು ಇವರು *ನಿಯಮ 72 ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.*

**ವಿಷಯ :** ಕರ್ನಾಟಕದಲ್ಲಿರುವ ಜೀವ ನದಿಗಳಲ್ಲಿ ಒಂದಾಗಿರುವ ಮಹಾದಾಯಿ ಕಳಸಾ–ಬಂಡೂರಿ ನಾಲಾ ಜೋಡಣೆ ಅಥವಾ ಮಹಾದಾಯಿ ತಿರುವು ಹೆಸರಿನಿಂದ ಕರೆದುಕೊಳ್ಳುವ ಈ ಯೋಜನೆ ಕರ್ನಾಟಕ ಸರ್ಕಾರದ ಒಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಕರ್ನಾಟಕದಿಂದ ಗೋವಾ ಕಡೆ ನೀರು ಹರಿಯುತ್ತದೆ. ಕೇಂದ್ರ ಜಲ ಆಯೋಗದ ಅಧ್ಯಯನದಂತೆ 200 ಟಿಎಂಸಿ ನೀರು ಯಾವುದೇ ನೆರೆ ರಾಜ್ಯಗಳು ಬಳಸದೇ ಅನುಪಯುಕ್ತವಾಗಿ ಅರಬ್ಬಿ ಸಮುದ್ರವನ್ನು ಸೇರುತ್ತಿದೆ ಎಂದು ತನ್ನ ವರದಿಯಲ್ಲಿ ತಿಳಿಸಿರುತ್ತದೆ.

ಉತ್ತರ ಕರ್ನಾಟಕದ ಧಾರವಾಡ, ಬೆಳಗಾವಿ, ಗದಗ ಮತ್ತು ಬಾಗಲಕೋಟೆ ಜಿಲ್ಲೆಯ 13 ತಾಲ್ಲೂಕು ಸೇರಿದಂತೆ ಹುಬ್ಬಳ್ಳಿ–ಧಾರವಾಡ ಮಹಾನಗರಕ್ಕೆ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಈ ಮಹಾತ್ವಾಕಾಂಕ್ಷೆ ಯೋಜನೆಯನ್ನು ಶೀಘ್ರ ಜಾರಿಗೆ ತರಬೇಕಾಗಿದೆ. ಮಹಾದಾಯಿ ನೀರು ಅನುಪಯುಕ್ತವಾಗಿ ಅರಬ್ಬಿ ಸಮುದ್ರವನ್ನು ಸೇರುತ್ತಿರುವ ನೀರನ್ನು ಈ ಭಾಗದ ಜನರಿಗೆ ಕುಡಿಯುವ ನೀರಿನ ಉಪಯೋಗಕ್ಕಾಗಿ ಬಳಸುವ ಸಲುವಾಗಿ ಮಹಾದಾಯಿ ಕಣಿವೆಯಿಂದ ಕಳಸಾ–ಬಂಡೂರಿ ಯೋಜನೆ ಆ ಭಾಗದ ಸಂಜೀವನಿ ಎಂದೇ ಕರೆಯಿಸಿಕೊಳ್ಳುವ ಮಲಪ್ರಭಾ ನದಿಗೆ ಕೊರತೆ ಇರುವ ನೀರನ್ನು ಸರಿದೂಗಿಸಲು ನದಿಗೆ ಹರಿಸುವುದೇ ನಮ್ಮ ರಾಜ್ಯದ ಉದ್ದೇಶವಾಗಿದೆ. ಕಳೆದ ಸಾಲಿನ ಆಯ–ವ್ಯಯದಲ್ಲಿ ಮಿಸಲಿಟ್ಟ ಹಣವು ವ್ಯಯವಾಗಿರುವುದಿಲ್ಲಾ. ಪ್ರಸ್ತುತ ಸಾಲಿನಲ್ಲಿ ರೂ.1000 ಕೋಟಿ ಅನುದಾನವನ್ನು ಮೀಸಲಿಟ್ಟಿದ್ದು, ಅತಿ ಶೀಘ್ರದಲ್ಲಿಯೇ ಈ ಹಣವನ್ನು ಉಪಯೋಗಿಸಲು ರಾಜ್ಯ ಸರ್ಕಾರ ಸದರಿ ಕಾಮಗಾರಿಗೆ ಟೆಂಡರ್ ಕರೆದು ಕಾರ್ಯಾದೇಶ ನೀಡಬೇಕಾಗಿದೆ. ಮಹಾದಾಯಿ ನ್ಯಾಯಾಧೀಕರಣ ತೀರ್ಪು ಕರ್ನಾಟಕರಾಜ್ಯಕ್ಕೆ 13.42 ಟಿಎಂಸಿ ನೀರನ್ನು ಉಪಯೋಗಿಸಲು ಹಂಚಿಕೆ ಮಾಡಿದ ಆದೇಶ ಮೇಲೆ ಸುಪ್ರಿಂ ಕೋರ್ಟಿನ ನಿರ್ದೇಶನದ ಪ್ರಕಾರ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದ್ದರೂ ಕೂಡ ಇಲ್ಲಿಯವರಿಗೂ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರದ ವಿಳಂಬಕ್ಕೆ ಕಾರಣವೇನು. ಇದು ಪ್ರಮುಖ ವಿಷಯವಾಗಿದ್ದು, ಈ ಯೋಜನೆಯನ್ನು ಜಾರಿ ಮಾಡಲು ತಡವಾಗುತ್ತಿರುವ ಕುರಿತು.

***

ಮಾನ್ಯ ಮಹಾದಾಯಿ ನ್ಯಾಯಾಧೀಕರಣವು ತನ್ನ ತೀರ್ಪನ್ನು ದಿನಾಂಕ:14.08.2018 ರಂದು ನೀಡಿದ್ದು, ಕರ್ನಾಟಕ ರಾಜ್ಯಕ್ಕೆ 13.42 ಟಿಎಂಸಿ ನೀರಿನ ಹಂಚಿಕೆ ಮಾಡಲಾಗಿರುತ್ತದೆ. ಮಹಾದಾಯಿ ನ್ಯಾಯಾಧೀಕರಣದ ತೀರ್ಪನ್ನು ಕೇಂದ್ರ ಜಲ ಶಕ್ತಿ ಮಂತ್ರಾಲಯದ, ಜಲ ಸಂಪನ್ಮೂಲ ಇಲಾಖೆ ದಿನಾಂಕ:27.02.2020 ರಲ್ಲಿ ವಿಶೇಷ ಗೆಜೆಟ್ ಅಧಿಸೂಚನೆ ಹೊರಡಿಸಿರುತ್ತದೆ.

ಮಾನ್ಯ ಮಹಾದಾಯಿ ನ್ಯಾಯಾಧೀಕರಣವು ತನ್ನ ಅಂತಿಮ ತೀರ್ಪನಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ 1.72 ಟಿ.ಎಂ.ಸಿ. ಮತ್ತು ಬಂಡೂರಿ ನಾಲಾ ತಿರುವು ಯೋಜನೆಗೆ 2.18 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಲಾಗಿರುತ್ತದೆ. ಮಾನ್ಯ ಮಹಾದಾಯಿ ನ್ಯಾಯಾಧೀಕರಣವು ದಿನಾಂಕ:14.08.2018 ರಂದು ನೀಡಿದ ವರದಿ / ತೀರ್ಪಿನಲ್ಲಿ ನೀರನ್ನು ತಿರುವುಗೊಳಿಸಲು ರಾಜ್ಯವು ವಿಸ್ತೃತ ಯೋಜನಾ ವರದಿಗಳು ಹಾಗೂ ಶಾಸನಬದ್ಧ ತಿರುವಳಿಗಳನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಳ್ಳುವ ನಿಬಂಧನೆಗಳನ್ನು ವಿಧಿಸಿರುತ್ತದೆ.

ಮಾನ್ಯ ನ್ಯಾಯಾಧೀಕರಣದ ತೀರ್ಪಿನ ಅನ್ವಯ ಕಳಸಾ ಬಂಡೂರಿ ನಾಲಾ ತಿರುವು ಯೋಜನೆಯ ರೂ.885.70 ಕೋಟಿ ಹಾಗೂ ಬಂಡೂರಿ ನಾಲಾ ತಿರುವು ಯೋಜನೆಯ ರೂ.791.50 ಕೋಟಿ ಪರಿಷ್ಕೃತ ಅಂದಾಜು ಮೊತ್ತಕ್ಕೆ (2018–19ನೇ ಸಾಲಿನ ದರಪಟ್ಟಿ) ಸರ್ಕಾರದ ಆದೇಶ ದಿನಾಂಕ:10.07.2020 ರಲ್ಲಿ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ರಾಜ್ಯ ಸರ್ಕಾರವು ಈಗಾಗಲೇ, ಕಳಸಾ ಹಾಗೂ ಬಂಡೂರಾ ನಾಲಾ ತಿರುವು ಯೋಜನೆಗಳ ಒಟ್ಟು ರೂ.1677.30 ಕೋಟಿ ಅಂದಾಜು ಮೊತ್ತದ ಪೂರ್ವ ಕಾರ್ಯಸಾಧ್ಯತಾ ವರದಿಗಳನ್ನು ಕೇಂದ್ರ ಜಲ ಆಯೋಗ, ನವದೆಹಲಿಗೆ ದಿನಾಂಕ:22.05.2020 ರಂದು ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಪ್ರಸ್ತುತ ಸದರಿ ಪೂರ್ವ ಕಾರ್ಯಸಾಧ್ಯತಾ ವರದಿಗಳು ಕೇಂದ್ರ ಜಲ ಆಯೋಗದಲ್ಲಿ ಪರಿಶೀಲನಾ ಹಂತದಲ್ಲಿರುತ್ತವೆ.

ಮುಂದುವರೆದು, ಕಳಸಾ ಹಾಗೂ - ಬಂಡೂರ ನಾಲಾ ತಿರುವು ಯೋಜನೆಗಳು ಕುಡಿಯುವ ನೀರಿನ ಯೋಜನೆಗಳಾಗಿರುವ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದ Environment Impact Assessment (EIA) 2006ರ ಅಧಿಸೂಚನೆಯನ್ವಯ ವಿನಾಯಿತಿ ನೀಡುವಂತೆ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ (MoEF) ಕ್ಕೆ ಕೋರಿದ್ದು, ಇದಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರದ ಮಂತ್ರಾಲಯವು ದಿನಾಂಕ: 17.10.2019ರ ಪತ್ರದಲ್ಲಿ ಸದರಿ ಯೋಜನೆಯು ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ Environment Impact Assessment (EIA) 2006ರ ಅಧಿಸೂಚನೆಯನ್ವಯ ವಿನಾಯಿತಿ ನೀಡಿರುತ್ತದೆ.

ಸದರಿ ಯೋಜನೆಗಳಿಗೆ ಅಣೆಕಟ್ಟಿನ ಪ್ರದೇಶದಲ್ಲಿ ಮುಳುಗಡೆ, ಕೂಡು ಕಾಲುವೆ ಹಾಗೂ ಇನ್ನಿತರೆ ಕಟ್ಟಡಗಳ ನಿರ್ಮಾಣಕ್ಕಾಗಿ ಕಳಸಾ ಯೋಜನೆ ಅಡಿಯಲ್ಲಿ 258 ಹೆಕ್ಟೆರ್ ಅರಣ್ಯ ಭೂಮಿ ಹಾಗೂ ಬಂಡೂರಾ ಯೋಜನೆ ಅಡಿಯಲ್ಲಿ 243 ಹೆಕ್ಟೆರ್‌ಗಳ ಅರಣ್ಯ ಭೂಮಿ ಅವಶ್ಯಕತೆ ಇದ್ದು, ಇದಕ್ಕಾಗಿ Stage-I Forest Clearance ಗಳಿಗೆ (kept in abeyance by MoEF & CC) ಅಗತ್ಯ ತಿರುವಳಿ ನೀಡುವಂತೆ ರಾಜ್ಯ ಸರ್ಕಾರದಿಂದ ಕೋರಲಾಗಿದೆ.

ಪ್ರಸ್ತುತ, ಸರ್ಕಾರವು 2022-23 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಹಾದಾಯಿ ನ್ಯಾಯಾಧೀಕರಣ ತೀರ್ಪಿನನ್ವಯ ರಾಜ್ಯದ ಕಳಸಾ ಮತ್ತು ಬಂಡೂರಿ ನಾಲಾ ತಿರುವು ಯೋಜನೆಗಳನ್ನು ಅನುಷ್ಠಾನಗೊಳಿಸಲು ರೂ.1000 ಕೋಟಿಗಳ ಅನುದಾನ ಒದಗಿಸಲು ಘೋಷಿಸಲಾಗಿರುತ್ತದೆ.

ಕಳಸಾ ನಾಲಾ – ಬಂಡೂರ ನಾಲಾ ತಿರುವು ಯೋಜನೆಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯವಿರುವ ಎಲ್ಲಾ ತಿರುವಳಿಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಯೋಜನೆಯ ತೀವ್ರ ಅನುಷ್ಠಾನಕ್ಕೆ ಕ್ರಮ ವಹಿಸಲಾಗುವುದು.

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು